
Karnataka Board

Mid Term Question Paper



2nd PUC
Question Paper

aglasem.com

ದ್ವಿತೀಯ ಪಿ.ಯು.ಸಿ ಅರ್ಧವಾರ್ಷಿಕ ಪರೀಕ್ಷೆ-2022

ಸಮಯ : 3 ಗಂಟೆ 15 ನಿಮಿಷಗಳು | ವಿಷಯ : **ಇತಿಹಾಸ (21)** | ಅಂಕಗಳು : 100

ಸೂಚನೆಗಳು : 1) ಪ್ರಶ್ನೆಗಳ ಕ್ರಮ ಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.

2) ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳು ಭಾಗ–ಡಿ ಯಲ್ಲಿ ಭೂಪಟದ ಪ್ರಶ್ನೆಗಳಾದ ಪ್ರಶ್ನೆ ಸಂಖ್ಯೆ 31 'ಎ' ಬದಲಿಗೆ ಪ್ರಶ್ನೆ ಸಂಖ್ಯೆ 31'ಬಿ' ಯನ್ನು ಉತ್ತರಿಸುವುದು.

3) ಪ್ರಶ್ನೆಯ ಸೂಚನೆಗಳಿಗನ್ವಯವಾಗಿ ಉತ್ತರಿಸುವುದು.

ಭಾಗ - ಎ

I. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. 10X1=10

1) ಪ್ರಾಚೀನ ಕರ್ನಾಟಕದ ಮೇರೆ ಉಲ್ಲೇಖಿಸುವ ಗ್ರಂಥವನ್ನು ಹೆಸರಿಸಿ.
2) ದಕ್ಷಿಣ ಭಾರತದಲ್ಲಿ ಮಾನವನು ಉಪಯೋಗಿಸಿದ ಮೊದಲ ಲೋಹ ಯಾವುದು ?
3) ಸಿಂಧೂ ನಾಗರಿಕತೆಯ ಹಡಗುಕಟ್ಟೆ ಎಲ್ಲಿ ಪತ್ತೆಯಾಗಿದೆ ?
4) ಆರ್ಯರು ಯಾವುದನ್ನು ಸಂಪತ್ತೆಂದು ಪರಿಗಣಿಸಿದ್ದರು ?
5) ಇಂತಿಕಾವನ್ನು ಯಾರು ಬರೆದರು ?
6) ಗುಪ್ತಶಕೆ ಯಾವಾಗ ಆರಂಭವಾಯಿತು ?
7) 'ಕುಮಿವಲ್ಲಿ' ಎಂದರೇನು ?
8) 'ಭಾರತದ ಗಿಣಿ' ಎಂದು ಯಾರನ್ನು ಕರೆಯಲಾಗಿದೆ ?
9) ಅಕ್ಬರನ ಪ್ರಸಿದ್ಧ ಕಂದಾಯ ಮಂತ್ರಿ ಯಾರು ?
10) ಶಿವಾಜಿಯ ಕಿರೀಟಧಾರಣೆಯಾದ ವರ್ಷ ಯಾವುದು ?

ಭಾಗ - ಬಿ

II. ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡು ಪದ ಅಥವಾ ಎರಡು ವಾಕ್ಯದಲ್ಲಿ ಉತ್ತರಿಸಿ. 10X2=20

11) ಭಾರತದ ಯಾವುದಾದರೂ ಎರಡು ಹೆಸರುಗಳನ್ನು ತಿಳಿಸಿರಿ.
12) ಹಳೆಯ ಶಿಲಾಯುಗದ ಯಾವುದಾದರೂ ಎರಡು ತಾಣಗಳನ್ನು ತಿಳಿಸಿ.
13) ವೈದಿಕ ಕಾಲದಲ್ಲಿ ರಾಜನಿಗೆ ಯಾವ ಎರಡು ರಾಜಕೀಯ ಸಂಸ್ಥೆಗಳು ಸಹಾಯ ಮಾಡುತ್ತಿದ್ದವು ?
14) ಜೈನ ಧರ್ಮದ ಪಂಗಡಗಳಾವುವು ?
15) ಮೌರ್ಯರ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ಎರಡು ಬಗೆಯ ನ್ಯಾಯಾಲಯಗಳಾವುವು ?
16) ಶಕ್ಕೋಳಂ ಕದನವು ಯಾವಾಗ ಮತ್ತು ಯಾರ ನಡುವೆ ನಡೆಯಿತು ?
17) ಗೊಮ್ಮಟೇಶ್ವರ ವಿಗ್ರಹವನ್ನು ಪ್ರತಿಷ್ಠಾಪಿಸಿದವರು ಯಾರು ಮತ್ತು ಎಲ್ಲಿ ?
18) ಪಂಪನ ಯಾವುದಾದರೂ ಎರಡು ಕೃತಿಗಳನ್ನು ಹೆಸರಿಸಿ.
19) 'ವಿಕ್ರಮ ಶಕೆ' ವನ್ನು ಯಾರು ಮತ್ತು ಯಾವಾಗ ಆರಂಭಿಸಿದರು ?
20) ದೆಹಲಿಯನ್ನು ಆಳಿದ ಯಾವುದಾದರೂ ಎರಡು ಸುಲ್ತಾನ ಸಂತತಿಗಳನ್ನು ಹೆಸರಿಸಿ.
21) ಅಬುಲ್ ಫಜಲ್‌ನ ಎರಡು ಕೃತಿಗಳನ್ನು ಹೆಸರಿಸಿ.
22) ಶಿವಾಜಿಯು ಸಂಗ್ರಹಿಸುತ್ತಿದ್ದ ಎರಡು ಪ್ರಮುಖ ತೆರಿಗೆಗಳು ಯಾವುವು ?

ಭಾಗ - ಸಿ

III. ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ. 6X5=30

23) ಭಾರತದ ಇತಿಹಾಸದ ಮೇಲೆ ಭೂಗೋಳದ ಪ್ರಭಾವವನ್ನು ಸಂಕ್ಷಿಪ್ತವಾಗಿ ವಿವರಿಸಿ.
24) ಹೊಸ ಧರ್ಮಗಳ ಉದಯಕ್ಕೆ ಕಾರಣವಾದ ಅಂಶಗಳಾವುವು ?
25) ಗಾಂಧಾರ ಕಲಾಶೈಲಿಯ ಪ್ರಮುಖ ಲಕ್ಷಣಗಳನ್ನು ವಿವರಿಸಿ.
26) ಚೋಳರ ಗ್ರಾಮಾಡಳಿತವನ್ನು ವಿವರಿಸಿ.
27) ಅಮೋಘವರ್ಷನ ಸಾಧನೆಗಳನ್ನು ವಿವರಿಸಿ.

(ಪ್ರ.ತಿ.ನೋ)

aglasem.com
schools.aglasem.com

28) ಹೊಯ್ಸಳ ವಾಸ್ತುಶೈಲಿಯ ಪ್ರಮುಖ ಲಕ್ಷಣಗಳನ್ನು ವಿವರಿಸಿ.

29) ಅಲ್ಲಾವುದ್ದೀನ್ ಖಿಲ್ಜಿಯ ದಕ್ಷಿಣ ದಂಡಯಾತ್ರೆಯ ಬಗ್ಗೆ ಒಂದು ವಿವರಣೆ ಬರೆಯಿರಿ.

30) ಶಿವಾಜಿಯ ಆಡಳಿತ ಪದ್ಧತಿಯ ಬಗ್ಗೆ ಒಂದು ವಿವರಣೆ ನೀಡಿ.

ಭಾಗ - ಡಿ

IV. ಸೂಚನೆಗಳನ್ವಯ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ. 5+5=10

31ಎ) ನಿಮಗೆ ಒದಗಿಸಿರುವ ಭಾರತದ ಭೂಪಟದಲ್ಲಿ ಈ ಕೆಳಗಿನ ಯಾವುದಾದರೂ ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ.

ಎ) ತಕ್ಷಶಿಲಾ ಬಿ) ಪಾಟಲಿಪುತ್ರ ಸಿ) ಬದಾಮಿ ಡಿ) ಕಂಚಿ

ಇ) ದೆಹಲಿ ಎಫ್) ದೇವಗಿರಿ ಜಿ) ಪಾಣಿಪತ್ ಹೆಚ್) ಹಂಪಿ

(ದೃಷ್ಟಿವಿಕಲ ಚೇತನ ವಿದ್ಯಾರ್ಥಿಗಳಿಗೆ ಮಾತ್ರ)

31ಬಿ) ಕೆಳಗಿನ ಪ್ರಶ್ನೆಯನ್ನು 30 ರಿಂದ 40 ವಾಕ್ಯದಲ್ಲಿ ಉತ್ತರಿಸಿ : 1X10=10

ಇಮ್ಮಡಿ ಪುಲಿಕೇಶಿಯ ಸಾಧನೆಗಳನ್ನು ವಿವರಿಸಿ.

-ಅಥವಾ-

ದೆಹಲಿ ಸುಲ್ತಾನರ ಕೊಡುಗೆಗಳ ಬಗ್ಗೆ ಒಂದು ವಿವರಣೆ ನೀಡಿ.

ಭಾಗ - ಇ

V. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ 30 ರಿಂದ 40 ವಾಕ್ಯದಲ್ಲಿ ಉತ್ತರಿಸಿ. 2X10=20

32) ಸಿಂಧೂ ನಾಗರಿಕತೆಯ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

33) ಬುದ್ಧನ ಜೀವನ ಮತ್ತು ಬೋಧನೆಗಳನ್ನು ಚಿತ್ರಿಸಿ.

34) ಗುಪ್ತರ ಕಾಲವನ್ನು ಭಾರತದ ಇತಿಹಾಸದಲ್ಲಿ 'ಸುವರ್ಣಯುಗ' ಎಂದು ಏಕೆ ಕರೆಯುತ್ತಾರೆ ?

35) ಅಕ್ಬರನ ಸಾಧನೆಗಳನ್ನು ವಿವರಿಸಿ.

ಭಾಗ - ಎಫ್

VI. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ. 5X1=5

36)

1) ಮೆಗಾಸ್ತನೀಸ್	–	ಪ್ರಸಿದ್ಧ ಸಂಗೀತಗಾರ
2) ಹರ್ಷವರ್ಧನ	–	ಛತ್ರಪತಿ
3) 1ನೇ ಕೃಷ್ಣ	–	ಇಂಡಿಕಾ
4) ತಾನ್‌ಸೇನ್	–	ಉತ್ತರ ಪಥೇಶ್ವರ
5) ಶಿವಾಜಿ	–	ಕೈಲಾಸನಾಥ ದೇವಾಲಯ

37) ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ. 5X1=5

1) ಮೊದಲನೇ ಪಾಣಿಪತ್ ಕದನ

2) ವಿಕ್ರಮ ಶಕೆ ಆರಂಭ

3) ಭಾರತಕ್ಕೆ ಆರ್ಯರ ಆಗಮನ

4) ದಿನ್-ಇ-ಇಲಾಹಿ ಸ್ಥಾಪನೆ

5) ಕಳಿಂಗ ಯುದ್ಧ

aglasem.com
schools.aglasem.com
AglaSem Earn while Learn Program. Send your papers and get paid.
Contact: support@aglasem.com aglasem.com